**ದಿನಾಂಕ: 28/06/2022ರಂದು** ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಇವರು ಚಿಕ್ಕಕುರವತ್ತಿ ಮರಳು ಬ್ಲಾಕ್ (Block No. 2) ರಲ್ಲಿ ತುಂಗಭದ್ರಾ ನದಿಯ ತಳದಿಂದ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ಪಕ್ಕದ ಸ. ನಂ. 9, 10, 11 ಮತ್ತು 12 (P) ಚಿಕ್ಕಕುರವತ್ತಿ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 34.30 ಎಕರೆ (13.88 ಹೆಕ್ಟೇರ್) ಪ್ರದೇಶದಲ್ಲಿ, ವರ್ಷಕ್ಕೆ 1,43,248 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ ಮಾಡಲು ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಚಿಕ್ಕಕುರವತ್ತಿ ಗ್ರಾಮದ ಚಿಕ್ಕಕುರವತ್ತಿ ಮರಳು ಬ್ಲಾಕ್ (Block No. 2) ರಲ್ಲಿ ತುಂಗಭದ್ರಾ ನದಿ ಪಕ್ಕದ ಸ. ನಂ. 9, 10, 11 ಮತ್ತು 12 (P) ರಲ್ಲಿ |
| ದಿನಾಂಕ | 28/06/2022 |
| ಅಧ್ಯಕ್ಷತೆ | ಡಾ: ಎನ್. ತಿಪ್ಪೇಸ್ವಾಮಿ, ಕ.ಆ.ಸೇ.<br>ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,<br>ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ,<br>ಹಾವೇರಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ–1 |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ–2 |
| ಭಾಗವಹಿಸಿದ ಸಾರ್ವಜನಿಕರ ವಿವರ | ಅನುಬಂಧ–3 |
| ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿ | ಅನುಬಂಧ–4 |

**ಪೀಠಿಕೆ:–**

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಇವರು ಚಿಕ್ಕಕುರವತ್ತಿ ಮರಳು ಬ್ಲಾಕ್ (Block No. 2) ರಲ್ಲಿ ತುಂಗಭದ್ರಾ ನದಿಯ ತಳದಿಂದ ಸಾಮಾನ್ಯ ಮರಳು ಬ್ಲಾಕ್–2ರ ಸ.ನಂ. 9, 10, 11 ಮತ್ತು 12 (P) ಚಿಕ್ಕಕುರವತ್ತಿ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 34.30 ಎಕರೆ (13.88 ಹೆಕ್ಟೇರ್) ಪ್ರದೇಶದಲ್ಲಿ, ವರ್ಷಕ್ಕೆ 1,43,248 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ತೆರೆದ ಅರೆ–ಯಾಂತ್ರೀಕೃತ ಪದ್ಧತಿಯ (Open cast Semi-mechanised method) ಪ್ರಕಾರ ಮಾಡಲು ಉದ್ದೇಶಿಸಿರುತ್ತಾರೆ.

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ ಇವರು ದಿನಾಂಕ: 14/09/2006 (ತಿದ್ದುಪಡಿ ದಿನಾಂಕ: 01/12/2009) ರಂದು ಹೊರಡಿಸಿರುವ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ ಮತ್ತು ಇತರೆ ತಿದ್ದುಪಡಿ ಪ್ರಕಾರ, ಸದರಿ ಯೋಜನೆಗೆ ರಾಜ್ಯ ಪರಿಸರ

ಆಘಾತ ಅಧ್ಯಯನ ಪ್ರಾಧಿಕಾರ (SEIAA), ಕರ್ನಾಟಕದಿಂದ ಪರಿಸರ ವಿಮೋಚನ ಪತ್ರ ಪಡೆಯುವ ಪೂರ್ವದಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅನ್ನು ಪತ್ರ ಸಂಖ್ಯೆ: SEIAA 438 MIN 2021 ದಿನಾಂಕ 6/12/2021ರಂದು ನೀಡಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ ಆಘಾತ ಅಂದಾಜೀಕರಣ ವರದಿಯನ್ನು' ಹಾಗೂ ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ದಿನಾಂಕ 12/02/2022 ರಂದು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂಧಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು ಉದ್ದೇಶಿತ ಯೋಜನಾ ಸ್ಥಳದಲ್ಲಿ ದಿನಾಂಕ 28/06/2022ರಂದು ಮಧ್ಯಾಹ್ನ 12:00 ಗಂಟೆಗೆ ನಿಗದಿಪಡಿಸಲಾಗಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್"** ಮತ್ತು ಕನ್ನಡ ಪತ್ರಿಕೆಯಾದ **"ವಿಜಯವಾಣಿ"** ದಿನ ಪತ್ರಿಕೆಗಳಲ್ಲಿ ದಿನಾಂಕ: 28/05/2022 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆಯಾದ **"ಕೌರವ" ದಿನಪತ್ರಿಕೆಯಲ್ಲೂ** ಸಹ ದಿನಾಂಕ: 2/06/2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು.

ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ-ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಆಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ ಜಿಲ್ಲೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಜಿಲ್ಲೆ, ತಾಲ್ಲೂಕು ಪಂಚಾಯತಿ, ರಾಣೇಬೆನ್ನೂರು, ಗ್ರಾಮ ಪಂಚಾಯತಿ ಕಾರ್ಯಾಲಯ, ಚಿಕ್ಕಕುರವತ್ತಿ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಾವೇರಿ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ: 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

ದಿನಾಂಕ 28/06/2022 ರಂದು ಮಧ್ಯಾಹ್ನ 12:00 ಗಂಟೆಗೆ ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಚಿಕ್ಕಕುರವತ್ತಿ ಗ್ರಾಮದ ಉದ್ದೇಶಿತ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲಾಯಿತು. ಡಾ: ಸುಧಾ ಸೌಮ್ಯಲತ ಎಂ. ಕೆ, ಪರಿಸರ ಅಧಿಕಾರಿಗಳು ಪ್ರಾದೇಶಿಕ ಕಛೇರಿ, ಹಾವೇರಿ ಇವರು ಡಾ: ಎನ್.ತಿಪ್ಪೇಸ್ವಾಮಿ, ಕ.ಆ.ಸೇ. ಅಪರ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ, ಶ್ರೀ ಎಸ್. ಬಿ. ಉಳ್ಳೇಗಡ್ಡಿ, ಉಪ ವಿಭಾಗಾಧಿಕಾರಿಗಳು, ಹಾವೇರಿ ಉಪ ವಿಭಾಗ, ಹಾವೇರಿ ಹಾಗೂ ಇತರೆ ಇಲಾಖೆಯ ಅಧಿಕಾರಿಗಳು, ಯೋಜನೆಯ ಪ್ರತಿನಿಧಿಗಳು ಹಾಗೂ ಸ್ಥಳದಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ನಂತರ ಇವರು ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಇವರು ಪರಿಸರ ಆಘಾತ ಅಧಿಸೂಚನೆ, 2006ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮಗಳನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯು ಪರಿಸರ ಆಘಾತ ಅಧಿಸೂಚನೆ, 2006 ಮತ್ತು ತಿದ್ದುಪಡಿಯ ವ್ಯಾಪ್ತಿಯಲ್ಲಿ ಸೇರಿರುವುದರಿಂದ, ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಅಪರ ಜಿಲ್ಲಾಧಿಕಾರಿಗಳಿಗೆ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, ಡಾ: ಎನ್. ತಿಪ್ಪೇಸ್ವಾಮಿ, ಕ.ಆ.ಸೇ. ಅಪರ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಇವರು ಸಭೆಯ ಮಹತ್ವವನ್ನು ತಿಳಿಸುತ್ತಾ, ಮೆ.ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪ್ರತಿನಿಧಿಯವರಿಗೆ ಯೋಜನೆಯ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಲು ನಿರ್ದೇಶಿಸಿದರು ಮತ್ತು ಯೋಜನೆಯ ಬಗ್ಗೆ ಅಭಿಪ್ರಾಯಗಳು, ಆಕ್ಷೇಪಗಳು ಇದ್ದಲ್ಲಿ ಯೋಜನೆಯ ಪ್ರತಿನಿಧಿಗಳು ಉದ್ದೇಶಿತ ಯೋಜನೆಯನ್ನು ಪ್ರಸ್ತುತ ಪಡಿಸಿದ ನಂತರ ತಿಳಿಸಲು ಸಾರ್ವಜನಿಕರಿಗೆ ಸೂಚಿಸಿದರು.

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನ ಶ್ರೀ ರಾಘವ ಇವರು ಚಿಕ್ಕಕುರವತ್ತಿ ಬ್ಲಾಕ್-2ರಲ್ಲಿ ಮರಳು ಕ್ವಾರಿಯನ್ನು ಮಾಡಲು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರಿಗೆ ಸರಕಾರದ ವತಿಯಿಂದ ಅನುಮೋದನೆ ನೀಡಲಾಗಿದೆ. ಸರ್ಕಾರ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದೆ. ಈ ಕಮಿಟಿಯಲ್ಲಿ ಮೈನ್ಸ್ ಮತ್ತು ಜಿಯಾಲಜಿ ಇಲಾಖೆಯವರು, ಮಾಲಿನ್ಯ ನಿಯಂತ್ರಣ ಮಂಡಳಿ, ಅರಣ್ಯ ಇಲಾಖೆ ಹಾಗೂ ಇರಿಗೇಶನ್ ಡಿಪಾರ್ಟಮೆಂಟ್ ಈ ಎಲ್ಲ ಸರ್ಕಾರಿ ಸಂಸ್ಥೆಗಳ ಅಧಿಕಾರಿಗಳಿರುತ್ತಾರೆ. ಇನ್ನು ಮುಂದೆ ಮರಳು ಗಣಿಗಾರಿಕೆಯನ್ನು ನಿಯಂತ್ರಣ ಮಾಡುವುದು ಹಾಗೂ ವೈಜ್ಞಾನಿಕವಾಗಿ ಮರಳು ಗಣಿಗಾರಿಕೆ ಮಾಡುವ ಮತ್ತು ಇದನ್ನು ಪರಿಶೀಲಿಸುವ ಒಂದು ಸಿಸ್ಟಮ್‌ನ್ನು ಸರ್ಕಾರದವರು ಮಾಡುತ್ತಾರೆ. ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರು ಸರ್ಕಾರದ ಕಂಪನಿಯಾದ್ದರಿಂದ ಸರ್ಕಾರದ ವತಿಯಿಂದ ಅವರಿಗೆ ಉತ್ತರ ಕರ್ನಾಟಕದ ಎಲ್ಲ ಮರಳು ಬ್ಲಾಕ್‌ಗಳಲ್ಲಿ ಕೆಲಸ ಮಾಡಲು ಜವಾಬ್ದಾರಿಯನ್ನು ನೀಡಲಾಗಿದೆ. ಇದರ ಜೊತೆಯಲ್ಲಿ ಸರ್ಕಾರದ ಉದ್ದೇಶ ಎಲ್ಲರಿಗೂ ಮರಳು ಸಿಗುವ ಹಾಗೆ ಆಗಬೇಕು ಸಾರ್ವಜನಿಕರಿಗೆ ಹಳ್ಳಿಯಲ್ಲಿ ಇರುವ ಜನರಿಗೆ ಒಂದೇ ದರದಲ್ಲಿ ಅಂದರೆ ನಿಯಮಿತ ದರದಲ್ಲಿ ಎಲ್ಲರಿಗೂ ಮರಳಿನ ಅಗತ್ಯ ಇದೆ. ಅದನ್ನು ಪೂರೈಸುವ ಜವಾಬ್ದಾರಿ ಸರಕಾರದ್ದು ಇದೆ. ಆಒಂದು ನಿಟ್ಟಿನಲ್ಲಿ ಏಳು ನೂರು ರೂಪಾಯಿ ಒಂದು ಟನ್ನಿಗೆ ಸರ್ಕಾರ ನಿಗದಿ ಮಾಡಿದೆ. ಇದರಂತೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರಿಗೆ ಈ ಒಂದು ಮರಳನ್ನು ಪ್ರತಿಯೊಬ್ಬರಿಗೂ ದೊರಕುವ ಹಾಗೆ ಮಾಡುವ ಜವಾಬ್ದಾರಿಯಾಗಿದೆ. ಹಾಗೆ ಮರಳನ್ನು ತೆಗೆದ ಮೇಲೆ ಇಲ್ಲಿ ಈ ಗ್ರಾಮಕ್ಕೇನು ಉಪಯೋಗ ಎಂದು

ನೀವು ಕೇಳಬಹುದು? ಗ್ರಾಮಕ್ಕೆ ಈ ಮರಳಿನಿಂದ ಬಂದಂತಹ ಹಣದಲ್ಲಿ ರಾಜಧನವನ್ನು ಸರ್ಕಾರಕ್ಕೆ ಕಟ್ಟಲಾಗುತ್ತದೆ. ಆ ರಾಜಧನದಲ್ಲಿ ಶೇಕಡ 25ರಷ್ಟು ಹಣವನ್ನು ಗ್ರಾಮ ಪಂಚಾಯಿತಿಯವರಿಗೆ ಕೊಡಲಾಗುತ್ತದೆ. ಈ ಹಣದಲ್ಲಿ ಗ್ರಾಮ ಪಂಚಾಯಿತಿಯವರು ತಮ್ಮ ಗ್ರಾಮಕ್ಕೆ ಬೇಕಾದಂತಹ ಸೌಕರ್ಯಗಳನ್ನು ಮಾಡುವ ಅವಕಾಶ ಇರುತ್ತದೆ. ರಸ್ತೆ ಆಗಬಹುದು, ಡ್ರೈನೇಜ್ ಸಿಸ್ಟಮ್ ಆಗಿರಬಹುದು, ಶೌಚಾಲಯ ಆಗಬಹುದು, ಅಂಗನವಾಡಿ ಅಥವಾ ಶಾಲೆಗಳಲ್ಲಿ ದುರಸ್ತಿ ಆಗಿರಬಹುದು, ಈ ತರಹ ಎಲ್ಲಾ ಕಾರ್ಯಗಳಿಗೆ ಅದನ್ನು ಬಳಸಿಕೊಂಡು ಗ್ರಾಮದ ಉದ್ಧಾರನೂ ಆಗುತ್ತದೆ. ಅದರ ಜೊತೆಯಲ್ಲಿ ಜನಗಳಿಗೂ ಕೂಡ ಇದರಿಂದ ಅನುಕೂಲ ಆಗುತ್ತದೆ. ಈ ಅಕ್ರಮ ಗಣಿಗಾರಿಕೆಯನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರವು ಈ ಯೋಜನೆಯನ್ನು ಅಳವಡಿಸಿಕೊಂಡಿದೆ. ಅದರಿಂದ ಇದು ವ್ಯವಸ್ಥಿತವಾಗಿ ಇನ್ನು ಮುಂದೆ ನಡೆಯುತ್ತದೆ. ಹಾಗೆ ಈ ತುಂಗಭದ್ರಾ ನದಿಯ ತೀರದಲ್ಲಿ ಸರ್ಕಾರಿ ಭೂಮಿಯಲ್ಲಿ ಮಾತ್ರ ಈ ಗಣಿಗಾರಿಕೆಯನ್ನು ಮಾಡಲಾಗುತ್ತದೆ. ಅದು ನದಿಯ ದಡದಲ್ಲಿ ಮಾತ್ರ ಮರಳನ್ನು ತೆಗೆಯಲಾಗುತ್ತದೆ. ಆ ದಡದಲ್ಲಿ ಬರಿ ಒಂದು ಮೀಟರ್ ಅಷ್ಟೇ ತೆಗೆಯಲು ಅವಕಾಶ ಇರುತ್ತದೆ. ಏಕೆಂದರೆ ಅತಿ ಹೆಚ್ಚು ತೆಗೆದಾಗ ತಗ್ಗಾಗುವುದು, ದನಕರುಗಳು ಸಾಯುವುದು ಅಥವಾ ಮನುಷ್ಯರು ಬಿದ್ದು ಸಾಯುವುದು ಈ ತರ ಎಲ್ಲಾ ಅನಾಹುತಗಳನ್ನು ನಾವು ನೋಡುತ್ತಿದ್ದೇವೆ. ಇದೆಲ್ಲ ವೈಜ್ಞಾನಿಕವಾಗಿ ಇನ್ನು ಮುಂದೆ ನಡೆಯುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದನ್ನೆಲ್ಲ ಪರಿವೀಕ್ಷಣೆ ಮಾಡಿ ಸರಿಯಾಗಿ ನಡೆಯುವ ಕಾರ್ಯಕ್ರಮ ಇನ್ನು ಮುಂದೆ ಆಗುತ್ತದೆ. ಅದಕ್ಕೆ ಸರ್ಕಾರದವರು 2022ರ ನೂತನ ಮರಳು ನೀತಿಯನ್ನು ತಂದಿದ್ದಾರೆ. ಈ ನೂತನ ಮರಳು ನೀತಿಯಲ್ಲಿ ಸಾರ್ವಜನಿಕರಿಗೆ ಎಲ್ಲರಿಗೂ ಉಪಯೋಗ ಆಗುತ್ತದೆ. ಅದರ ಜೊತೆಗೆ ಗ್ರಾಮದ ಉದ್ಧಾರನೂ ಗ್ರಾಮಸ್ತರು ಮಾಡಿಕೊಳ್ಳಬಹುದಾಗಿದೆ. ಹಾಗೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ವತಿಯಿಂದ ಈ ಮರಳು ತೆಗೆಯುವ ಜೊತೆಗೆ ಹಲವಾರು ಗ್ರಾಮಕ್ಕೆ ಸೌಲಭ್ಯಗಳನ್ನು ನೀಡಲು ಕೆಲವು ಹಣಗಳನ್ನು ಮೀಸಲಿಟ್ಟಿರುತ್ತದೆ. ಆ ಹಣದಲ್ಲಿ ಸರ್ಕಾರಿ ಶಾಲೆಗಳಾಗಬಹುದು, ಕುಡಿಯುವ ನೀರಾಗಬಹುದು, ಚರಂಡಿ ಜೀರ್ಣೋದ್ಧಾರ ಆಗಬಹುದು ಈ ತರಹ ಎಲ್ಲ ಕೆಲಸಗಳನ್ನು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ವತಿಯಿಂದ ಮಾಡಲಾಗುತ್ತದೆ. ಇದು ಒಂದು ಸರ್ಕಾರದಿಂದ ನಡೆಯುತ್ತಿರುವಂತಹ ಕಾರ್ಯಕ್ರಮ ಇದಕ್ಕೆ ಎಲ್ಲ ಸಾರ್ವಜನಿಕರ ಒಂದು ಸಹಭಾಗಿತ್ವ ಸಹಕಾರ ಬೇಕಾಗಿರುತ್ತದೆ. ಹಾಗಾಗಿ ಗ್ರಾಮಸ್ತರು ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು, ಅಧ್ಯಕ್ಷರು ಇದರಲ್ಲಿ ಒಳಗೊಂಡಿರುತ್ತಾರೆ. ಹಾಗೆ ಗ್ರಾಮದ ಮಟ್ಟದಲ್ಲಿ ಕೆರೆ, ಹಳ್ಳ ಕೊಳ್ಳಗಳಲ್ಲಿ ಕೂಡ ಗ್ರಾಮಕ್ಕೆ ಮರಳು ತೆಗೆಯಲು ಅನುಮತಿ ಕೊಟ್ಟಿರುತ್ತಾರೆ. ಮೂರುನೂರು ರೂಪಾಯಿ ಪ್ರತಿ ಟನ್ನಿಗೆ ಗ್ರಾಮಸ್ಥರು ಗ್ರಾಮ ಪಂಚಾಯಿತಿಯಿಂದ ಈ ಮರಳನ್ನು ತೆಗೆಯುವ ಅವಕಾಶವನ್ನು ಸರ್ಕಾರದಿಂದ ಮಾಡಲಾಗಿದೆ. ಈ ನದಿಯಿಂದ ಏನು ಬರುತ್ತದೆ ಅದು ಮಾತ್ರ ಸರ್ಕಾರಿ ಭೂಮಿಯಲ್ಲಿ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರೆ ತೆಗೆಯುವ ಒಂದು ಕಾರ್ಯಕ್ರಮ ಈ ಸಣ್ಣ ಪುಟ್ಟ ಹಳ್ಳಿಗಳಲ್ಲಿ ಗ್ರಾಮ ಪಂಚಾಯತ್ ವತಿಯಿಂದ ಈ ಕೆಲಸಗಳನ್ನು ಮಾಡುವ ಅವಕಾಶ ಇದೆ. ಹಾಗೆಯೇ ಪ್ರತಿಯೊಬ್ಬರಿಗೂ ಈ ಒಂದು ಕಾರ್ಯಕ್ರಮದಿಂದ ಗ್ರಾಮದ ಉದ್ಧಾರದ ಜೊತೆಯಲ್ಲಿ ಎಲ್ಲರಿಗೂ ಮರಳು ಸಿಗಲಿ ಎನ್ನುವ ಉದ್ದೇಶದಿಂದ, ಇದು ನಾವು ಹೇಗೆ ಮನೆಗೆ ಗ್ಯಾಸ ಸಿಲಿಂಡರ್ ಬೇಕಾದರೆ ಮೊಬೈಲ್‌ನಲ್ಲಿ ಬುಕ್ ಮಾಡುತ್ತೇವೆ ಅದೇ ತರಹ ಇನ್ನು ಮುಂದೆ ಮರಳನ್ನು ಕೂಡ ನೀವು ಬುಕ್ ಮಾಡಬಹುದು. ಹಾಗಾಗಿ ನಿಮಗೆ ಎಷ್ಟು ಬೇಕಾಗುತ್ತದೆ. ಅಷ್ಟು ಪ್ರಮಾಣದ ಮರಳನ್ನು ನಾವು ಮೊಬೈಲ್ ಮುಖಾಂತರವೇ ಈ ಏಳು ನೂರು ರೂಪಾಯಿ ಪ್ರತಿ ಟನ್ನಿಗೆ ಬುಕ್ ಮಾಡಿ ಸಾರ್ವಜನಿಕರು ಇದರಿಂದ ಪ್ರಯೋಜನವನ್ನು

ಪಡೆದುಕೊಳ್ಳಬಹುದು. ಇದೊಂದು ಸರ್ಕಾರದ ಅತ್ಯುತ್ತಮವಾದಂತಹ ಯೋಜನೆಯಾಗಿದೆ. ಹಾಗಾಗಿ ಮುಂದಿನ ಈ ಯೋಜನೆಯ ಕೂಲಂಕುಶ ವರದಿಯನ್ನು ಸಿದ್ಧಪಡಿಸಿ ತಮ್ಮ ಮುಂದೆ ಪ್ರಸ್ತುತ ಪಡಿಸಲಿದ್ದಾರೆ. ತಾವೆಲ್ಲ ಇದನ್ನು ಕೇಳಿ ನಂತರ ನಿಮಗೇನಾದರೂ ಅನಿಸಿಕೆಗಳಿದ್ದಲ್ಲಿ ಮಾನ್ಯ ಅಪರ ಜಿಲ್ಲಾಧಿಕಾರಿಗಳ ಮುಂದೆ ಬಂದು ನಿಮ್ಮ ಅನಿಸಿಕೆಗಳು, ಅಭಿಪ್ರಾಯಗಳನ್ನು ಈ ವೇದಿಕೆಯ ಮುಂದೆ ವ್ಯಕ್ತಪಡಿಸಬಹುದು. ಈಗ ಹ್ಯೂಬರ್ಟ್ ಎನ್ವಿರಾನ್‌ಮೆಂಟಲ್ ಸಿಸ್ಟಮ್ಸ್, ಚೆನ್ನೈಯಿಂದ ಬಂದು ಈ ಒಂದು ಯೋಜನೆಯ ವಿವರವನ್ನು ನೀಡಲಿದ್ದಾರೆ.

ಮೆ.ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಮೆ॥ ಹ್ಯೂಬರ್ಟ್‌ನ ಶ್ರೀಮತಿ ಇಂಪನಾ. ಇವರು, ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಚಿಕ್ಕಕುರವತ್ತಿ ಮರಳು ಬ್ಲಾಕ್ (Block No. 2)ರಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ಪಕ್ಕದ ಸ.ನಂ. 9, 10, 11 ಮತ್ತು 12 (P) ಚಿಕ್ಕಕುರವತ್ತಿ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 34.30 ಎಕರೆ (13.88 ಹೆಕ್ಟೇರ್) ಪ್ರದೇಶದಲ್ಲಿ, ವರ್ಷಕ್ಕೆ 1,43,248 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಉದ್ದೇಶಿತ ಮರಳು ಗಣಿಗಾರಿಕೆಯನ್ನು ಸಾಮಾನ್ಯ ಮರಳು ಗಣಿಗಾರಿಕೆ ವಿಧಾನದಲ್ಲಿ ಮಾಡಲಾಗುವುದು. ಹಿಟಾಚಿ ಮತ್ತು ಜೆಸಿಬಿಯನ್ನು ಅಗೆಯಲು ಮತ್ತು ಲೋಡ್ ಮಾಡುವ ಚಟುವಟಿಕೆಗಳಿಗೆ ಬಳಸಲಾಗುವುದೆಂದು ಸಭೆಗೆ ತಿಳಿಸಿದರು. ಸದರಿ ಯೋಜನೆ ಕುರಿತಾದ ಪ್ರಮುಖ ಅಂಶಗಳು, ಯೋಜನೆಯಿಂದ ಸುತ್ತಲಿನ ಪರಿಸರಕ್ಕೆ ಆಗಬಹುದಾದ ಪರಿಣಾಮ, ಪರಿಸರ ನಿರ್ವಹಣೆ, ಮಾಲಿನ್ಯ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗುವ ಕ್ರಮಗಳು, ಸಿಎಸ್‌ಆರ್ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು. ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿಯನ್ನು ಅನುಬಂಧ-4ರಲ್ಲಿ ಲಗತ್ತಿಸಿದೆ.

ಈ ಯೋಜನೆಯ ಸಂಕ್ಷಿಪ್ತ ಮಾಹಿತಿಯನ್ನು ಉಪ ವಿಭಾಗಾಧಿಕಾರಿಯವರು ತಮ್ಮ ಮುಂದೆ ಪ್ರಸ್ತುತ ಪಡಿಸಲಿದ್ದಾರೆ ಎಂದು ಶ್ರೀ ರಾಘವ ತಿಳಿಸಿದರು.

ಉಪವಿಭಾಗಾಧಿಕಾರಿಗಳಾದ ಶ್ರೀ ಶಿವಾನಂದ ಉಳ್ಳೇಗಡ್ಡಿಯವರು ಮಾತನಾಡುತ್ತ, ಉದ್ದೇಶ ಏನಿದೆ, ಏಕೆ ಇದನ್ನು ಮಾಡುತ್ತಿದ್ದಾರೆ ಅಂತ ಗೊತ್ತಿದೆ. ನನಗೆ ಗೊತ್ತಿದ್ದ ಹಾಗೆ ಈಗ ತಮಗೆಲ್ಲ ಈ ಹಿಂದೆ ಕಾನೂನುಬಾಹಿರವಾಗಿ ಚಟುವಟಿಕೆ ನಡೆಯುತ್ತಿದೆ. ಇಲ್ಲಿ ಅಂತ ಅಷ್ಟೇ ಅಲ್ಲ. ಎಲ್ಲೆಲ್ಲಿ ತುಂಗಭದ್ರ ನದಿಯ ಪಾತ್ರ ಇದೆ ಅಲ್ಲೆಲ್ಲ. ತಹಶೀಲ್ದಾರರು ನಾವು ಹಗಲು ರಾತ್ರಿ ಇಲ್ಲಿ ಬಂದು ಕಾಯುತ್ತಿದ್ವಿ. ಅದೆಲ್ಲ ಇನ್ನು ಮುಂದೆ ತಪ್ಪುತ್ತದೆ. ಸರ್ಕಾರವು ಸರ್ಕಾರದ ಅಂಗವಾದ ಸಂಸ್ಥೆಗೆ ಇದನ್ನು ವಹಿಸಿದ್ದಾರೆ. ಇಲ್ಲಿ ಈ ತರಹ ಕಾನೂನುಬಾಹಿರವಾಗಿ ಚಟುವಟಿಕೆ ಬಂದಾಗುತ್ತದೆ. ಜೊತೆಗೆ ಎಲ್ಲಾ ಗ್ರಾಮಗಳಿಗೆ ಮರಳು ಮಾರಾಟದಿಂದ ಬರುವ ರಾಜಧನದ ಶೇಕಡಾ 25 ಅನುದಾನವನ್ನು ಕೊಡಲಾಗುತ್ತದೆ. ಅದರಿಂದ ಎಲ್ಲ ಡೆವಲಪ್‌ಮೆಂಟ್ ವರ್ಕ್ಸ್‌ಗಳನ್ನು ನೀವು ತೆಗೆದುಕೊಳ್ಳಬಹುದು ಅಲ್ಲಿ ಆಗಲೇ ಹೇಳಿದ ಹಾಗೆ ಗಟಾರ ಇರಬಹುದು, ರೋಡ್ ಇರಬಹುದು, ಸ್ಕೂಲ್ ಇರಬಹುದು, ಅಂಗನವಾಡಿ ಇರಬಹುದು. ಪಂಚಾಯಿತಿ ಇರಬಹುದು. ಪಂಚಾಯಿತಿಗೆ ಸಂಬಂಧಿಸಿದ ಎಲ್ಲ ಗ್ರಾಮಗಳಿಗೆ ಇದರಿಂದ ಒಳ್ಳೆಯ ಅನುಕೂಲತೆ ಆಗುತ್ತದೆ. ಜೊತೆಗೆ ಏನು ಅನಧಿಕೃತವಾಗಿ ಮರಳು ತೆಗೆಯುವುದು ನಿಲ್ಲುತ್ತದೆ. ಮತ್ತೆ ಕಡಿಮೆ ದರದಲ್ಲಿ ನಮಗೆಲ್ಲ ಮರಳು ಸಿಗುತ್ತದೆ. ಈಗ ಒಂದು ಟನ್ನಿಗೆ ಸರ್ಕಾರ ನಿಗದಿಪಡಿಸಿದ್ದು ಏಳುನೂರು ರೂಪಾಯಿ ಹಾಗೆ ತಮಗೆ ಅಗತ್ಯತೆಗೆ ತಕ್ಕಂತೆ ಮರಳನ್ನು ತೆಗೆದುಕೊಂಡು ಹೋಗಬಹುದು. ಇಷ್ಟೆಲ್ಲ ಅವರಿಗೆ ತಿಳಿಸಿದ್ದಾರೆ. ಇದರ

ಮುಂದೆ ನಿಮಗೇನಾದರೂ ಅನಿಸಿಕೆಗಳಿದ್ದರೆ, ಆಕ್ಷೇಪಗಳೇನಾದರೂ ಇದ್ದರೆ, ಈ ಕುರಿತು ಒಬ್ಬೊಬ್ಬರಾಗಿ ಬಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ತಮ್ಮ ಮುಂದಿದ್ದಾರೆ. ತಾವು ಲಿಖಿತ ಮುಖಾಂತರವಾಗಲಿ ಅಥವಾ ಮೌಖಿಕವಾಗಿಯಾಗಲೀ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬೇಕೆಂದು ಕೋರಿದರು.

**ನಂತರ ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.**

(1) ಶ್ರೀ ಬಸವರಾಜ ಚಂದ್ರಪ್ಪ ಬಣಕಾರ, ಚಿಕ್ಕಕುರವತ್ತಿ ಗ್ರಾಮ

ಇವರು ಮಾತನಾಡುತ್ತಾ, ಇಲ್ಲಿ ವನ್ಯ ಜೀವಿಗಳಂತು ಇಲ್ಲ ಅಂತ ಹೇಳಿದ್ದಾರೆ. ವನ್ಯ ಜೀವಿಗಳ ನಗರ ಇದು. ಊರು ಯಾವಾಗಲೂ ಇಲ್ಲೆಲ್ಲ ಹೊಳೆದಂಡೆನೆ ಅವುಗಳಿಗೆ ಆಸರೆ. ಅದನ್ನು ಬಿಟ್ಟರೆ ಎಲ್ಲೂ ಇರಲ್ಲ. ಇದನ್ನು ಬಿಟ್ಟು ಬೇರೆ ಕಡೆ ಹೋದರೆ ಪಾಪ ಅವುಗಳ ಜೀವನ ಹಾಳಾಗುತ್ತೆ ಎನ್ನುವುದು ನನ್ನ ಅನಿಸಿಕೆ. ನವಿಲುಗಳು ತುಂಬಾ ಇವೆ, ನದಿ ದಂಡೆಯಲ್ಲಿ ಇವೆ. ಇದಕ್ಕೆ ಮೆ.ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರು ವನ್ಯ ಜೀವಿ ಸುರಕ್ಷತಾ ಬಗ್ಗೆ ಯಾವುದೇ ಅಭಯಾರಣ್ಯ ಆಗಲಿ ನಾವು ತೊಂದರೆಯಾಗದ ಹಾಗೆ ಗಣಿಗಾರಿಕೆ ಮಾಡುತ್ತೇವೆ ಎಂದು ಹೇಳಿದರು. ಇದಕ್ಕೆ ಅಪರ ಜಿಲ್ಲಾಧಿಕಾರಿಗಳು ನಾವು ಅದರ ಬಗ್ಗೆ ನೋಟ್ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿದರು.

(2) ಶ್ರೀ ನಾಗರಾಜ ಸಿದ್ದಪ್ಪನವರ, ಚಿಕ್ಕಕುರವತ್ತಿ ಗ್ರಾಮ

ಇವರು ಮಾತನಾಡುತ್ತಾ, ಮೈನಿಂಗ್ ಟೈಮಿಂಗ್ ಹೇಳಿರುವುದಿಲ್ಲ ನೀವು. ಇದಕ್ಕೆ ಮೆ: ಹಟ್ಟಿ ಗೋಲ್ಡ್ ಮೈನ್ಸ್‌ರವರು ಬೆಳಿಗ್ಗೆ 6 ರಿಂದ ಸಂಜೆ 6 ಎಂದು ತಿಳಿಸಿದರು. ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯವರು ಮರಳು ಗಣಿಗಾರಿಕೆ ಪ್ರಾರಂಭಿಸಿದ ಬಗ್ಗೆ ಕೇಳಿದ ಪ್ರಶ್ನೆಗೆ ನದಿ ದಂಡೆಯಲ್ಲಿ ಮರಳು ಗಣಿಗಾರಿಕೆಯನ್ನು ಪ್ರಾರಂಭ ಮಾಡಿರುವುದಿಲ್ಲ ಎಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು. ನಂತರ ನಾಗರಾಜ ಸಿದ್ದಪ್ಪನವರು ಸ್ಥಳೀಯರಿಗೆ ರೂಪಾಯಿ 700 ಕ್ಕಿಂತ ಕಡಿಮೆ ದರದಲ್ಲಿ ಅಂದರೆ 300 ರೂಪಾಯಿ ಪ್ರತಿ ಟನ್ನಿಗೆ ಮರಳು ಪೂರೈಸಿದರೆ ಅನುಕೂಲವಾಗುತ್ತದೆ ಎಂದು ಕೇಳಿಕೊಂಡರು. ಮರಳು ತೆಗೆಯುವ ವೆಚ್ಚ, ನಿರ್ವಹಣಾ ವೆಚ್ಚ ಇವುಗಳೆಲ್ಲವೂ ಸರಕಾರದಿಂದಲೇ ನಿಗದಿಯಾಗಿರುವುದರಿಂದ ಇವುಗಳನ್ನು ಪರಿಶೀಲಿಸಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅವರ ನಿರ್ಧಾರದ ಬಗ್ಗೆ ತಿಳಿಸಲಾಗುವುದು ಎಂದು ಮಾನ್ಯ ಅಪರ ಜಿಲ್ಲಾದಿಕಾರಿಗಳು ಹೇಳಿದರು. ಮೈನಿಂಗ್ ಚಟುವಟಿಕೆಯು ಮಶಿನ್ ಕಾಮಗಾರಿಯೋ ಅಥವಾ ಕೂಲಿಗಾರರ ಕಾಮಗಾರಿಯೋ ಎಂದು ಪ್ರಶ್ನಿಸಿದರು. ಇಲ್ಲಿ ಕೂಲಿ ಕಾರ್ಮಿಕರನ್ನೊಳಗೊಂಡ ಅರೆ ಯಾಂತ್ರಿಕ ಪದ್ಧತಿಯ ಮರಳು ಗಣಿಗಾರಿಕೆ ಚಟುವಟಿಕೆಯನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹೇಳಿದರು. ಸುಮಾರು 150 ಕುಟುಂಬಗಳು ಮರಳು ತೆಗೆದು ಜೀವನ ಸಾಗಿಸುತ್ತಿದ್ದವು ಅವರಿಗೆ ಕೆಲಸ ನೀಡುವ ಬಗ್ಗೆ ಒತ್ತಾಯಿಸಿದರು. ಕೆಲಸ ಇಲ್ಲದವರಿಗೆ, ಮರಳು ಗಣಿಗಾರಿಕೆಯಲ್ಲಿ ಕೆಲಸ ಮಾಡುವ ಆಸಕ್ತಿ ಇದ್ದಲ್ಲಿ ಅಂಥವರಿಗೆ ಕೆಲಸದ ಅವಕಾಶ ಇದೆ. ಇಡಿ ವರ್ಷದಲ್ಲಿ ಎಷ್ಟು ಮರಳು ತೆಗೆಯಬೇಕೆಂದು ನಿಗದಿಯಾಗಿದೆ ಮತ್ತು ಒಂದು ಮೀಟರ್ ಆಳಕ್ಕಿಂತ ಕೆಳಗೆ ಹೋಗಿ ಮರಳು ತೆಗೆಯುವಂತಿಲ್ಲ. ಹಾಗಾಗಿ ಆ ಮಿತಿಯಲ್ಲಿ ಮರಳು ತೆಗೆಯುವುದರಿಂದ ಎಷ್ಟು ಜನರ ಅವಶ್ಯಕತೆ ಇದೆಯೋ ಅಷ್ಟೇ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಹಾಗೆ ಪ್ರಾಜೆಕ್ಟ್ ಪ್ರಕಾರ 25 ಕೆಲಸಗಾರರ ಅವಶ್ಯಕತೆ

ಇರುತ್ತದೆ ಎಂದು ತಿಳಿಸಿರುವುದರಿಂದ ಸ್ಥಳೀಯ ಕೆಲಸಗಾರರಿಗೆ ಆದ್ಯತೆಯನ್ನು ನೀಡಬೇಕು ಎಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

(3) ಶ್ರೀ ನಿಂಗಪ್ಪ ಮಡಿವಾಳರ, ಚಿಕ್ಕಕುರವತ್ತಿ ಗ್ರಾಮ

ಇವರು ಮಾತನಾಡುತ್ತಾ, ರೈತರು ತಮ್ಮ ಜಮೀನುಗಳಿಗೆ ನದಿಯಿಂದ ನೀರು ಪಡೆಯಲು ಪಂಪ್ ಸೆಟ್ ಮುಖಾಂತರ ಪೈಪ್‌ಲೈನ್‌ಗಳನ್ನು ಹಾಕಿರುತ್ತಾರೆ. ಈಗ ಮರಳು ಗಣಿಗಾರಿಕೆಗಾಗಿ ಭಾರಿ ವಾಹನಗಳ ಓಡಾಟ ಆಗುವುದರಿಂದ ಪೈಪ್‌ಲೈನ್‌ಗಳು ಒಡೆದು ಹೋಗುವ ಸಾಧ್ಯತೆ ಇರುತ್ತದೆ. ಆದಕ್ಕೆ ಪರಿಹಾರ ನೀಡಲು ವಿನಂತಿಸಿದರು. ಅದಕ್ಕೆ ಅಪರ ಜಿಲ್ಲಾಧಿಕಾರಿಗಳು ನೀರು ಸಾರ್ವಜನಿಕರದಾಗಿದ್ದು ನದಿ ನೀರು ಸಾರ್ವಜನಿಕರು ಬಳಸಬಹುದಾಗಿದ್ದು, ಪಂಪ್‌ಸೆಟ್ ಹಾಕಿ ನದಿ ನೀರನ್ನು ಉಪಯೋಗಿಸಲು ಅವಕಾಶ ಇರುವುದಿಲ್ಲ. ಭಾರಿ ವಾಹನಗಳ ಓಡಾಟದಿಂದ ಪೈಪ್‌ಲೈನ್ ಹಾಳಾಗುವ ಸಾಧ್ಯತೆ ಇದೆ. ಆದರೂ ಮಾನವೀಯತೆ ದೃಷ್ಟಿಯಿಂದ ಪೈಪ್‌ಲೈನ್ ಹಾಳಾಗದಂತೆ ಮತ್ತು ಗಣಿಗಾರಿಕೆ ಸಮಯದಲ್ಲಿ ರೈತರು ಮತ್ತು ಕಂಪನಿಯವರು ಪರಸ್ಪರ ಸಹಕರಿಸಲು ಕೋರಿಕೊಂಡರು.

(4) ಶ್ರೀ ಬಸವರಾಜ ಚಂದ್ರಪ್ಪ ಬಣಕಾರ, ಚಿಕ್ಕಕುರವತ್ತಿ ಗ್ರಾಮ

ಇವರು ಮಾತನಾಡುತ್ತಾ ನದಿ ದಡದಲ್ಲಿ ಭೂಮಿಗೆ ಬೇಕಾದ ಫಲವತ್ತಾದ ಮಣ್ಣು ಇರುವುದರಿಂದ ಅದನ್ನು ತೆಗೆಯಲು ಅವಕಾಶವಿದೆಯೇ ಎಂದು ಪ್ರಶ್ನಿಸುತ್ತಾರೆ. ನದಿ ಪಾತ್ರದಲ್ಲಿ ಫಲವತ್ತಾದ ಮಣ್ಣು ಮತ್ತು ಮರಳು ಎರಡು ಇರುತ್ತದೆ. ನದಿ ಪಾತ್ರವು ಸರಕಾರದಾಗಿದ್ದು, ಸರಕಾರದ ಅನುಮತಿ ಪಡೆದು ಅಧಿಕೃತವಾಗಿ ಮರಳನ್ನು ತೆಗೆಯಬಹುದಾಗಿರುತ್ತದೆ. ಆದರೆ ಮಣ್ಣನಲ್ಲ ಎಂದು ಅಪರ ಜಿಲ್ಲಾಧಿಕಾರಿಗಳು ವಿವರವಾಗಿ ತಿಳಿಸಿದರು. ಮುಂದುವರೆದು ಸಭೆಯಲ್ಲಿರುವ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಸದಸ್ಯರಿಗೆ ಮಾತನಾಡುವಂತೆ ಸೂಚಿಸಿದರು.

(5) ಶ್ರೀ ಹೊನ್ನಪ್ಪ ಬಸಪ್ಪ ಐರಣಿ, ಗ್ರಾಮ ಪಂಚಾಯಿತಿ ಸದಸ್ಯರು, ಚಿಕ್ಕಕುರವತ್ತಿ ಗ್ರಾಮ

ಇವರು ಮಾತನಾಡುತ್ತಾ ಸದರಿ ಯೋಜನೆಗೆ ನಮ್ಮ ಸಹಕಾರವಿರುತ್ತದೆ. ತಾವು ಕಾನೂನು ಪ್ರಕಾರ ಮಾಡಬೇಕೆಂದು ತಿಳಿಸಿದರು.

(6) ಶ್ರೀ ಬಸವರಾಜ ಹೊನ್ನಪ್ಪ ಬಣಕಾರ, ಗ್ರಾಮ ಪಂಚಾಯಿತಿ ಸದಸ್ಯರು, ಚಿಕ್ಕಕುರವತ್ತಿ ಗ್ರಾಮ

ಇವರು ಮಾತನಾಡುತ್ತಾ ಸದರಿ ಯೋಜನೆಗೆ ನಾವು ಅನುಕೂಲ ಮಾಡಿಕೊಡುತ್ತೇವೆ ಎಂದು ತಿಳಿಸಿದರು.

(7) ಶ್ರೀ ತಿರಕಪ್ಪ ತಳವಾರ, ಉಪಾಧ್ಯಕ್ಷರು, ಗ್ರಾಮ ಪಂಚಾಯಿತಿ, ಚಿಕ್ಕಕುರವತ್ತಿ ಗ್ರಾಮ.

ಇವರು ಮಾತನಾಡುತ್ತಾ ಸದರಿ ಯೋಜನೆಗೆ ನಾವು ಸಹಕಾರ ಕೊಡುತ್ತೇವೆ ಎಂದು ತಿಳಿಸಿದರು.

(8) ಶ್ರೀ ಶರಣಗೌಡ ಕೆಂಪಗೌಡರ, ಚಿಕ್ಕಕುರವತ್ತಿ ಗ್ರಾಮ

ಇವರು ಮಾತನಾಡುತ್ತಾ ಮರಳಿನ ಆದಾಯ ಸರಕಾರಕ್ಕೆ ಹೋಗುತ್ತಿದ್ದು, ಮರಳು ಸಾಗಣಿಕೆ

ಮಾಡುವಾಗ ರಸ್ತೆಗಳ ಸುರಕ್ಷತೆಗಾಗಿ ವಾಹನಗಳಿಗೆ ಮಿತಿಯಲ್ಲಿ ಲೋಡ್ ಮಾಡಬೇಕೆಂದು ಕೋರಿದರು. ಆಸೆಗೋಸ್ಕರ ಸಾರ್ವಜನಿಕರ ಪ್ರಾಣಕ್ಕೆ ಸಂಚಕಾರ ತರಬಾರದೆಂದು ಕೇಳಿಕೊಂಡರು.

ಇದಕ್ಕೆ ಉತ್ತರವಾಗಿ ಅಪರ ಜಿಲ್ಲಾಧಿಕಾರಿಗಳು ಸದರಿ ವಿಷಯವನ್ನು ಕಂಪನಿಯವರ ಗಮನಕ್ಕೆ ತರುತ್ತಾ, ಇದನ್ನು ಗಂಭೀರವಾಗಿ ಪರಿಗಣಿಸಿ ವಾಹನಗಳಿಗೆ ಓವರ್‌ಲೋಡ್ ಮಾಡದಿರಲು ತಿಳಿಸಿ, ರಸ್ತೆಗಳು ಹಾಳಾಗದಂತೆ ಗಮನ ಹರಿಸಲು ತಿಳಿಸಿದರು.

(9) ಶ್ರೀ ಹನುಮಂತಪ್ಪ ಅಕ್ಕಿ, ಗ್ರಾಮ ಪಂಚಾಯಿತಿ ಸದಸ್ಯರು, ಚಿಕ್ಕಕುರವತ್ತಿ ಗ್ರಾಮ.

ಇವರು ಮಾತನಾಡುತ್ತಾ ನಮ್ಮ ಗ್ರಾಮದ ಅಭಿವೃದ್ಧಿ ಮಾಡಬೇಕೆಂದು ಕೇಳಿಕೊಂಡರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸಾರ್ವಜನಿಕರು ಹೇಳಿದ ಅಭಿಪ್ರಾಯಗಳನ್ನು ವೀಡಿಯೋ ರೆಕಾರ್ಡ್ ಮಾಡಿದ್ದು, ಹೇಳಿದ ಎಲ್ಲಾ ಆಕ್ಷೇಪಣೆಗಳನ್ನು ಮತ್ತು ಅಹವಾಲನ್ನು ದಾಖಲಿಸಿ, ಸಭೆಯ ನಡಾವಳಿಯೊಂದಿಗೆ ವೀಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರ ಮುಖಾಂತರ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ಶ್ರೀ ರಾಘವ, ಹಿರಿಯ ಅಭಿಯಂತರರು (ಪರಿಸರ), ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿ, ಇವರು ವಂದಿಸಿದರು. ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಡಾ. ಎನ್. ತಿಪ್ಪೇಸ್ವಾಮಿ, ಕ.ಆ.ಸೇ.
ಅಪರ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಹಾವೇರಿ ಜಿಲ್ಲೆ